# ಸಣ್ಣಕತೆಯ ಅಳತೆ ಕುರಿತ ಮಾತುಕತೆ

ಮನುಷ್ಯ ಮಾತು ಕಲಿತ ಮೇಲೆ ಕತೆ ಹೇಳುವುದನ್ನು ಕಲಿಯಲು ಹೆಚ್ಚು ಕಾಲ ಬೇಕಾಗಲಿಲ್ಲ. ಏಕೆಂದರೆ ಬದುಕಿನ ಸಂಗತಿಗಳೇ ಕತೆಯಾಗಿ ಬದಲಾದವು. ಕತೆಗೆ ಸಾಹಿತ್ಯದ ಚೌಕಟ್ಟು ಬಂದದ್ದು ಎಷ್ಟೋ ಕಾಲದ ನಂತರ. ಅಂದಿನಿಂದ ಆರಂಭವಾದ ಸಣ್ಣಕತೆಯ ಉದ್ದ ಕುರಿತ ಚರ್ಚೆ, ಸಾಹಿತ್ಯದ ಒಂದು ಮುಗಿಯದ ಕತೆಯಾಗಿದೆ. ಇಂತಿಷ್ಟೇ ಪದಗಳ ಮಿತಿಯಲ್ಲಿ ಸಣ್ಣಕತೆ ಬರೆಯಿರಿ ಎಂದು ಕನ್ನಡದ ಪತ್ರಿಕೆಗಳು ನಿರ್ಬಂಧ ವಿಧಿಸುವುದು ಸರಿಯೇ ಎಂಬ ಹಳೆಯ ಆಕ್ಷೇಪ ಈಗ ಹೊಸದಾಗಿ ಕೇಳಿಬರುತ್ತಿದೆ.

ಕವಿತೆ ಪದಗಳಲ್ಲಿ ಅವಿತರೆ, ಸಣ್ಣಕತೆ ಪದಗಳಲ್ಲಿ ಅರಳುತ್ತದೆ. ಸೃಜನಶೀಲತೆಯ ಕಿರುಸೃಷ್ಟಿ ಎಂದೇ ಪರಿಗಣಿತವಾದ ಇದರ ಸ್ವರೂಪ, ಆಕೃತಿಆಕಾರ ಹೀಗೇ ಇರಬೇಕು ಎಂದು ತೀರ್ಮಾನಿಸುವುದು ಕಷ್ಟ ಎಂದು ಭಾವಿಸಲಾಗಿದೆ. ಆದರೆ ಕತೆಯ ಉದ್ದ ಗಾತ್ರ ಎಷ್ಟಿರಬೇಕು ಎಂಬ ವಿಷಯದಲ್ಲಿ ಐದು ಪುಟಗಳಿಂದ ಇಪ್ಪತ್ತು ಪುಟಗಳವರೆಗೆ, ಸಾವಿರ ಪದಗಳಿಂದ ಹದಿನೇಳು ಇಪ್ಪತ್ತು ಸಾವಿರ ಪದಗಳವರೆಗೆ ಎಂಬ ಉದ್ದನೆಯ ಚರ್ಚೆಯೂ ಕಾಣುತ್ತದೆ. ಕತೆ ತುಂಬಾ ದೊಡ್ಡದಾದರೆ, ಅದನ್ನು 'ಸಣ್ಣಕತೆ' ಎಂದು ಹೇಗೆ ಮತ್ತು ಏಕೆ ಕರೆಯುವುದು, ಅದು ಕಾದಂಬರಿ ಆಗುವುದಿಲ್ಲವೇ ಮತ್ತು ಆಗಬೇಕಲ್ಲವೇ ಎಂಬ ಪ್ರಶ್ನೆ ಎದುರಾಗಿದೆ. ಈ ನಡುವೆ ನೀಳ್ಗತೆ, ಕಿರುಕಾದಂಬರಿಗಳು ಬೇರೆ ಹುಟ್ಟಿವೆ. ಕತೆಯ ಉದ್ದವನ್ನು ಅದರ ವಸ್ತು ವಿನ್ಯಾಸ ನಿರ್ಧರಿಸಬೇಕೋ ಅಥವಾ ಅದನ್ನು ಬರೆಯುವವರು ಪ್ರಕಟಿಸುವವರು ತೀರ್ಮಾನಿಸಬೇಕೋ ಎಂಬ ಬಹುಮುಖ್ಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗಿಲ್ಲ. ಒಟ್ಟಿನಲ್ಲಿ ಸಣ್ಣಕತೆಯ ಉದ್ದಳತೆ ಕುರಿತ ದೊಡ್ಡ ಚರ್ಚೆಯದೇ ಒಂದು ಬೇರೆ ಕತೆ.



ಕತೆ ಎಷ್ಟೋ ಕಾಲ ಮೌಖಿಕ ಸಂಪ್ರದಾಯದಲ್ಲೇ ಇದ್ದಾಗ ಅದರ ಉದ್ದವನ್ನೂ ಕತೆ ಹೇಳುವ ಸಂದರ್ಭವೇ ನಿರ್ಧರಿಸುತ್ತಿತ್ತು. ಅಂದಮೇಲೆ ಇಪ್ಪತ್ತೊಂದನೆಯ ಶತಮಾನದ ಅಗತ್ಯಗಳು ಅದರ ಉದ್ದವನ್ನು ನಿರ್ಧರಿಸಬಾರದೆಂದರೆ ಹೇಗೆ? ಎಲ್ಲ ಕಾಲಕ್ಕೂ ಸಲ್ಲುವ ನಿಸ್ಸೀಮ ಕತೆಗಾರ ಎಡ್ಗರ್ ಅಲೆನ್ ಪೋ 'ಸಣ್ಣಕತೆ ಒಂದು ಓದಿನಲ್ಲಿ ಮುಗಿಸುವಂತಿರಬೇಕು' ಎಂದು ಹೇಳಿದ್ದಾನೆ. ಅವನ ಈ ಮಾತು ಇಂದಿನ ಕಾಲಕ್ಕೆ ಇನ್ನಷ್ಟು ಚೆನ್ನಾಗಿ ಸಲ್ಲುತ್ತದೆ. ಜಾಗತಿಕ ಸಾಹಿತ್ಯ ಲೋಕದಲ್ಲಿ ಈಗ ಸಣ್ಣಕತೆಯನ್ನು ಕುರಿತ ಅನಾದರ ಕಡಿಮೆಯಾಗಿ ಕಾದಂಬರಿಯ ಪಕ್ಕದಲ್ಲಿ ಸಣ್ಣಕತೆಗೆ ಜಾಗ ಸಿಗುತ್ತಿದೆಯಂತೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂದು ಭಾವಿಸುವ ಕಾಲ ಬಂದಿದೆಯಂತೆ. ಹಾಗಾಗಿ ಸಣ್ಣಕತೆಯ ಪದಗಳ ಮಿತಿಯೂ ಮತ್ತೆ ಚರ್ಚೆಗೆ ಬರುವುದು ಅಚ್ಚರಿಯಲ್ಲ.

ಕಳೆದ ನಾಲ್ಕೂವರೆ ದಶಕಗಳಲ್ಲಿ ಕನ್ನಡದ ಅನೇಕ ಶ್ರೇಷ್ಠ ಸಣ್ಣಕತೆಗಳನ್ನು ಪ್ರಕಟಿಸಿರುವ ನಿಮ್ಮ ನೆಚ್ಚಿನ 'ಮಯೂರ'ಕ್ಕೆ ಕತೆಯ ಉದ್ದಗಾತ್ರದ ಬಗ್ಗೆ ಸಿನಿಕತೆ ಇಲ್ಲ. ಆದರೆ 'ಕಿರಿದರೊಳ್ ಪಿರಿದರ್ಥಮಂ ಪೇಳುವ' ಕತೆಗಳಿಗೇ ಆದ್ಯತೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ!

-ಆರ್. ಪೂರ್ಣಿಮಾ